

ಅತಿಯಾಗಿ ಕುಡಿದ ವ್ಯಕ್ತಿಯೊಬ್ಬ ರಸ್ತೆಯಲ್ಲೇ ಮೂತ್ರ ಮಾಡುತ್ತಿದ್ದಾನೆ ಹಾಗೂ ಆತನ ಸೇವಕ ವೈನ್ ಕುಡಿಯುವ ಪಾತ್ರೆಯಲ್ಲಿಯೇ ಮೂತ್ರ ಸಂಗ್ರಹಿಸುತ್ತಿದ್ದಾನೆ (ಕ್ರಿ.ಪೂ.460 – 430ರ ಚಿತ್ರ)

ಗ್ರೀಕ್ ಸಾಹಿತ್ಯದ ಮೊರೆ ಹೋಗುತ್ತಾರೆ ಅದರಲ್ಲೂ ವಿಶೇಷವಾಗಿ ಅರಿಸ್ಟೋಫೇನ್ಸ್‌ನ 'ಓಲ್ಡ್ ಕಾಮಿಡಿ'. ಅವುಗಳ ಅಧ್ಯಯನದಿಂದ ಕ್ರಿ.ಪೂ. 5ನೇ ಶತಮಾನದಲ್ಲಿನ ಗ್ರೀಕರು ಯಾವುದನ್ನು ನೋಡಿ ನಗುತ್ತಿದ್ದರು, ಅವರಲ್ಲಿ ಲೇವಡಿ, ವ್ಯಂಗ್ಯದ ಭಾವನೆ ತರಿಸುತ್ತಿದ್ದ ವಿಷಯಗಳು ಯಾವುವು ಎಂಬುದನ್ನು ತಿಳಿಯಬಹುದು.

## ಮದಿರೆಯ ಪ್ರೇರಣೆ

ಆಗಿನ ಬಹುಪಾಲು ಮಣ್ಣಿನ ಧಾರಕಗಳ ಮೇಲಿನ ಚಿತ್ರಕಾರರು ಬಹುಪಾಲು ಅನಕ್ಷರಸ್ಥರಾಗಿದ್ದು ಮಧ್ಯಮ ಅಥವಾ ಕೆಳವರ್ಗದವರಾಗಿದ್ದರು. ಹಾಗಾಗಿ ಅವರು ಚಿತ್ರಿಸುತ್ತಿದ್ದ ಚಿತ್ರಗಳು ತಾವು ಕಾಣುತ್ತಿದ್ದ ತಮ್ಮ ದಿನನಿತ್ಯದ ಬದುಕಿನ ಹಾಗೂ ಸಾಮಾನ್ಯ ಜನರ ವ್ಯಂಗ್ಯದ ವಿಷಯಗಳಾಗಿರುತ್ತಿದ್ದವು. ಬಹುಪಾಲು ಆ ಚಿತ್ರಗಳಿಗೆ ವಿವರಣೆ ಅಥವಾ ಶೀರ್ಷಿಕೆ ಇಲ್ಲದಿರುತ್ತಿದ್ದುದರಿಂದ ಅವುಗಳ ಅರ್ಥ ಬಹು ವಿಶ್ಲೇಷಣೆಗೆ ಒಳಪಡುತ್ತವೆ. ಮಡಕೆ ಕುಡಿಕೆಗಳು ಎಲ್ಲರ ಮನೆಗಳಲ್ಲಿ ಬಳಸಲಾಗುತ್ತಿದ್ದುದರಿಂದ ಅವುಗಳ ಮೇಲೆ ಬರೆದ ಚಿತ್ರಗಳು ಬಹುಬೇಗ ಜನರನ್ನು ತಲುಪುತ್ತಿದ್ದವು. ಅಲ್ಲದೆ ಆಂಫೋರ, ಹೈಡ್ರಿಯಾಗಳು, ಕ್ರೇಟರ್, ಕೈಲಿಕ್ಸ್ ಮತ್ತು ಕುಡಿಯುವ ಬಟ್ಟಲುಗಳಾದ ಕಾಂತರೋಸ್ ಮುಂತಾದವು 'ಸಿಂಪೋಸಿಯಂ'ಗಳನ್ನು ತಲುಪುತ್ತಿದ್ದವೆಂಬುದು ಚಿತ್ರಕಾರರಿಗೆ ತಿಳಿದಿತ್ತು. ಇಂದು ಇಂಗ್ಲಿಷ್‌ನಲ್ಲಿ 'ಸಿಂಪೋಸಿಯಂ' ಎಂದರೆ ಶೈಕ್ಷಣಿಕ ಸಂಸ್ಥೆಗಳು, ಅಧ್ಯಯನ ಸಂಸ್ಥೆಗಳು ನಡೆಸುವ ವಿಚಾರಗೋಷ್ಠಿ ಎಂದಿದೆ. ಆದರೆ ಗ್ರೀಕ್ ಸಮಾಜದಲ್ಲಿ ಸಿಂಪೋಸಿಯಂಗಳು ಸಾಂಸ್ಥಿಕ ರೂಪ ಪಡೆದ ಗಂಡಸರ ಮದ್ಯಪಾನ ಗೋಷ್ಠಿಗಳಾಗಿದ್ದವು.

ಮದ್ಯಪಾನ ಗ್ರೀಕ್ ಸಮಾಜದ ಬಹಳ ಮುಖ್ಯವಾದ ಭಾಗವಾಗಿತ್ತು. ಸಿರಿವಂತ ಮೇಲ್ವರ್ಗದವರು ತಮ್ಮ ಮನೆಗಳಲ್ಲಿ 'ಸಿಂಪೋಸಿಯಂ' ಏರ್ಪಡಿಸಿ ಅಲ್ಲಿ ಸಂಜೆ ಗೆಳೆಯರೆಲ್ಲ ರೂಕಲೆತು ಉಂಡು, ಕುಡಿಯುತ್ತಿದ್ದರು. ಕುಡಿದು ಮತ್ತೇರಿಸಿಕೊಳ್ಳುವುದರ ಮೂಲಕ ಮದಿರೆಯ ದೇವನಾದ ಡೈಯೋನಿಸಸ್‌ನಿಗೆ ಹತ್ತಿರವಾಗುತ್ತೇವೆಂದು ನಂಬಿದ್ದರು. ಅಲ್ಲಿಯೇ ಅಲ್ಲಿನ ಗಂಡಸರು ರಾಜಕೀಯ, ಕಲೆ, ತತ್ವಶಾಸ್ತ್ರ, ವಿಜ್ಞಾನ, ವ್ಯವಹಾರಗಳ ಮತ್ತು ಸಾಮಾಜಿಕ ವಿಷಯಗಳ ಚರ್ಚೆ ನಡೆಸುತ್ತಿದ್ದರು. ಅಲ್ಲಿ ಅವರು ಕುಡಿದು ಸಂಕೋಚ ದೂರವಿರಿಸಿ ಮುಕ್ತವಾಗಿ ಚರ್ಚೆ ನಡೆಸಬೇಕೆಂಬುದನ್ನು ಪ್ರೋತ್ಸಾಹಿಸಲಾಗುತ್ತಿತ್ತು. ಕುಡುಕರಿಗೆ ತಮ್ಮ ಬಟ್ಟಲು ಹಾಗೂ ಮದಿರೆಯ ಧಾರಕಗಳ ಮೇಲಿನ ವ್ಯಂಗ್ಯ ಅಥವಾ ಅಶ್ಲೀಲ ಚಿತ್ರಗಳು ಮನರಂಜನೆ ನೀಡುತ್ತಿದ್ದವು. ಅವುಗಳ ಮೇಲೆ ಕುಡುಕರನ್ನು, ಹೆಂಗಸರನ್ನು, ದೇವಾನುದೇವತೆಗಳನ್ನು ಲೇವಡಿ ಮಾಡುವ ಚಿತ್ರಗಳು ಇರುತ್ತಿದ್ದವು. ಗ್ರೀಕ್ ಪುರಾಣದಲ್ಲಿ ಡೈಯಾನಿಸೋಸ್ ಮದಿರೆಯ ದೇವರಾದರೂ ಆತನನ್ನೂ ಮತ್ತು ವೀರಾಧಿವೀರ ಹರ್ಕ್ಯುಲಿಸ್ ಮುಂತಾದವರನ್ನು ಲೇವಡಿ ಮಾಡುವ ಚಿತ್ರಗಳಿರುತ್ತಿದ್ದವು. ಈ ಗ್ರೀಕ್ ಕಲಾವಿದರು ತಮ್ಮ ಪುರಾಣದ ದೇವಾನುದೇವತೆಗಳನ್ನು ಲೇವಡಿ ಮಾಡುವುದರಲ್ಲಿ ಯಾವುದೇ ಹಿಂಜರಿಕೆ ತೋರುತ್ತಿರಲಿಲ್ಲ.

ಕ್ರಿ.ಪೂ. 460–440ರ ಅವಧಿಯ ಸ್ಕೈಫೋಸ್ ಮೇಲಿನ ಚಿತ್ರವೊಂದರಲ್ಲಿ ಮನೆಯೊಡತಿಗೆ ತನ್ನ ಮನೆಯ ವೈನ್ ಉಗ್ರಾಣದಿಂದ ವೈನ್ ತರಲು ಹೇಳಿದ್ದರೆ, ಆಕೆ ಮತ್ತು ಆಕೆಯ ಸೇವಕಿ ವೈನ್ ಹೊತ್ತು ತರುತ್ತಿದ್ದಾರೆ. ಹಿಂದೆ ಸೇವಕಿ ವೈನ್ ಚೀಲ ಮುಂತಾದುವನ್ನು ಹೊತ್ತು ತರುತ್ತಿದ್ದರೆ ಆಕೆಯ ಮುಂದೆ ಮನೆಯೊಡತಿ ತಾನು ಕೊಂಡೊಯ್ಯುತ್ತಿರುವ ಸ್ಕೈಫೋಸ್‌ನಲ್ಲಿನ ವೈನ್ ಕುಡಿದುಕೊಂಡೇ ತನ್ನ ಗಂಡನ ಸಿಂಪೋಸಿಯಂಗೆ ಕೊಂಡೊಯ್ಯುತ್ತಿದ್ದಾಳೆ. ಕ್ರಿ.ಪೂ. 460–430ರ ಚಿತ್ರವೊಂದರಲ್ಲಿ ಅತಿಯಾಗಿ ಕುಡಿದ ವ್ಯಕ್ತಿಯೊಬ್ಬ ರಸ್ತೆಯಲ್ಲೇ ಮೂತ್ರ ಮಾಡುತ್ತಿದ್ದಾನೆ ಹಾಗೂ ಆತನ ಸೇವಕ ವೈನ್ ಕುಡಿಯುವ ಪಾತ್ರೆಯಲ್ಲಿಯೇ ಮೂತ್ರ ಸಂಗ್ರಹಿಸುತ್ತಿದ್ದಾನೆ. ಕ್ರಿ.ಪೂ. 440–420ರ ಒಂದು ಚಿತ್ರದಲ್ಲಿ ರಾತ್ರಿ ಕುಡಿದು ಬಂದ ಗಂಡ ತನ್ನ ಕೋಲಿನಿಂದ ಮನೆಯ ಬಾಗಿಲು ಬಡಿಯುತ್ತಿದ್ದಾನೆ ಹಾಗೂ ಬಾಗಿಲ ಹಿಂದೆ ದೀಪ ಹಿಡಿದು ನಿಂತಿರುವ ಹೆಂಗಸು ತನ್ನ ಕೈಯನ್ನು ಬಾಯಿಯ ಬಳಿ ತಂದು ಗಾಬರಿಯಿಂದ ನಿಂತಿದ್ದಾಳೆ.

## ಲೇಡಿಸ್ ಸ್ಪೆಷಲ್!

ಹೆಣ್ಣಿನ ಬಗೆಗೆ, ಆಕೆಯ ದಿನನಿತ್ಯದ ಬದುಕಿನ ಬಗೆಗೆ ಗ್ರೀಕ್ ಮಡಕೆ ಕುಡಿಕೆಗಳಲ್ಲಿ ಬೇಕಾದಷ್ಟು ಚಿತ್ರಗಳನ್ನು ಆಗಿನ ಕರಕುಶಲಗಾರರು ರಚಿಸಿದ್ದಾರೆ. ಚಿತ್ರಗಳು ಕಲೆಯಾದರೂ ಅವರಿಗೆ ಅದು ವ್ಯಾಪಾರವಾಗಿತ್ತು ಹಾಗೂ ಮಾರಾಟಕ್ಕೆ ಆಕರ್ಷಣೆಯಾಗಿತ್ತು. ಮಡಕೆಗಳ ಮೇಲಿನ ಚಿತ್ರಗಳು ಅವುಗಳ ಮಾರಾಟವನ್ನೂ ನಿರ್ಧರಿಸುತ್ತಿದ್ದವಲ್ಲದೆ ಅಲ್ಲಿ ಕಲಾಕಾರನ ಅಭಿಪ್ರಾಯ ಮುಖ್ಯವಾಗುತ್ತಿರಲಿಲ್ಲ, ಬದಲಿಗೆ ಯಾವ ಚಿತ್ರ ಬರೆದರೆ ಹೆಚ್ಚು ಮಾರಾಟವಾಗುತ್ತದೆ ಎನ್ನುವುದು ಮುಖ್ಯವಾಗಿರುತ್ತಿತ್ತು. ಗಂಡಸು